1 5 JUN 2017



ದಿನಾಂಕ 08-06-2017 ರ ಗುರುವಾರ ಬೆಳಿಗ್ಗೆ 11-00 ಗಂಟೆಗೆ ಶ್ರೀರಂಗಪಟ್ಟಣ ಉಪವಿಭಾಗ ಕಛೇರಿಯ ಆವರಣದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

ಹಾಜರಿದ್ದ ಅಧಿಕಾರಿಗಳು / ನೌಕರರು
ಶ್ರೀ / ಶ್ರೀಮತಿ / ಕುಮಾರಿ:

1. ಎ.ಎನ್. ರವಿಶಂಕರ್ : ಪ್ರಭಾರ ಅಇಂ(ವಿ), ಮಂಡ್ಯ ವೃತ್ತ.
2. ಇ. ರವಿಶಂಕರ್ : ಕಾನಿಇಂ(ವಿ), ಮಂಡ್ಯ ವೃತ್ತ.
3. ಎನ್. ಶ್ರೀನಿವಾಸಮೂರ್ತಿ : ಕಾನಿಇಂ(ವಿ), ಪಾಂಡವಪುರ ವಿಭಾಗ.
4. ಎಂ. ಪ್ರಕಾಶ್ : ಲೆಕ್ಕಾಧಿಕಾರಿ, ಪಾಂಡವಪುರ ವಿಭಾಗ.
5. ಮಹದೇವಪ್ಪ : ಲೆಕ್ಕಾಧಿಕಾರಿ, ಆಂ.ಪ., ಪಾಂಡವಪುರ ವಿಭಾಗ.
6. ಎಂ. ಮಂಜುನಾಥ ಪ್ರಸಾದ್ : ಸಕಾನಿಇಂ(ವಿ), ಶ್ರೀರಂಗಪಟ್ಟಣ ಉಪವಿಭಾಗ.
7. ಆರ್. ಚನ್ನಕೇಶವ : ಸಇಂ(ತಾಂ), ಶ್ರೀರಂಗಪಟ್ಟಣ ಉಪವಿಭಾಗ.
8. ಕೆ.ಎಂ. ಮಧುಸೂಧನ್ : ಸಇಂ(ವಿ), ಪಟ್ಟಣ ಶಾಖೆ, ಶ್ರೀರಂಗಪಟ್ಟಣ ಉಪವಿಭಾಗ.
9. ಕೆ. ನೇತ್ರಾವತಿ : ಸಇಂ(ವಿ), ಬೆಳಗೊಳ ಶಾಖೆ.
10. ಲೋಕೇಶ : ಸಇಂ(ವಿ), ಅರಕೆರೆ ಶಾಖೆ.
11. ಸಿ. ನವೀನ್ ಕುಮಾರ್ : ಕಿಇಂ(ವಿ), ನಗುವನಹಳ್ಳಿ ಶಾಖೆ.
12. ಎನ್. ಶಿಲ್ಪ : ಕಿಇಂ(ವಿ), ಕೆ. ಶೆಟ್ಟಹಳ್ಳಿ ಶಾಖೆ.
13. ಆರ್. ಶ್ರೀನಿವಾಸಮೂರ್ತಿ : ಕಿಇಂ(ವಿ), ಅರಕೆರೆ ಶಾಖೆ.
14. ಕೆ.ಆರ್. ರಾಜು : ಕಿಇಂ(ವಿ), ಕೊಡಿಯಾಲ ಶಾಖೆ.
15. ವಿ. ಕುಮಾರಸ್ವಾಮಿ : ಪ್ರಭಾರ ಕಿಆಸ., ಪಾಂಡವಪುರ ವಿಭಾಗ.
16. ಮುತ್ತುರಾಜ್ : ಹಿಸ., ಶ್ರೀರಂಗಪಟ್ಟಣ ಉಪವಿಭಾಗ.
17. ಸಿದ್ದಪ್ಪಾಜಿ : ಪ್ರಭಾರ ಹಿಸ., ಅರಕೆರೆ ಶಾಖೆ.

1583 20/6/17

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ಉಪವಿಭಾಗ, ಶ್ರೀರಂಗಪಟ್ಟಣ ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ / ನೌಕರರನ್ನು ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು.

S E (Elecl) Works Circle CESC | DCA | EEE / CAOC | AO Dvn. | AO (I/A) | SEE (Elecl)

ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ಆಲಿಸಿ ಬಗೆಹರಿಸುವ ನಿಟ್ಟಿನಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಜನ ಸಂಪರ್ಕ ಸಭೆಯನ್ನು ನಡೆಸುವಂತೆ KERC ರವರಿಂದ ಆದೇಶವಾಗಿರುತ್ತದೆ. ವಿದ್ಯುತ್ ದರವನ್ನು ಪರಿಷ್ಕರಿಸುವ ಸಂದರ್ಭದಲ್ಲಿ ವಿದ್ಯುತ್ ಬಳಕೆದಾರರ ಒಪ್ಪಿಗೆಯ ಅವಶ್ಯಕತೆ ಇರುತ್ತದೆ. ಶಾಖಾಧಿಕಾರಿಗಳು ವಿದ್ಯುತ್ ಬಳಕೆದಾರರ ಸಮಸ್ಯೆಗಳಿಗೆ ಸ್ಪಂದಿಸುವ ಕುರಿತು ಹಾಗೂ ಗ್ರಾಹಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಬಗ್ಗೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ ರವರು ವಿದ್ಯುತ್ ಸಂಬಂಧಿತ ದೂರುಗಳನ್ನು ಮೌಖಿಕವಾಗಿ / ಲಿಖಿತವಾಗಿ ಸಲ್ಲಿಸಿಕೊಳ್ಳುವಂತೆ ವಿದ್ಯುತ್ ಗ್ರಾಹಕರಲ್ಲಿ / ಸಾರ್ವಜನಿಕರಲ್ಲಿ ಕೇಳಲಾಯಿತು.

ಸದರಿ ಸಭೆಯಲ್ಲಿ ಹಾಜರಿದ್ದ ವಿದ್ಯುತ್ ಗ್ರಾಹಕರ ಮೌಖಿಕವಾಗಿ ತಿಳಿಸಿದ / ಲಿಖಿತ ಮನವಿಗಳಲ್ಲಿ ಉಲ್ಲೇಖಿಸಿರುವ ವಿದ್ಯುತ್ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸಭೆಯಲ್ಲಿ ತೆಗೆದುಕೊಂಡ / ತೆಗೆದುಕೊಳ್ಳಬೇಕಾದ ತೀರ್ಮಾನಗಳು ಈ ಕೆಳಕಂಡಂತೆ ಇರುತ್ತವೆ.

AEE(O) 19/6 AET Pl. file 72

1. <u>ಶ್ರೀ ಸೋಮಶೇಖರ್, ಬೊಮ್ಮೂರು ಅಗ್ರಹಾರ ಗ್ರಾಮ, ಮೊಬೈಲ್ ನಂ. 94487 50576.</u>

<u>ದೂರು:</u> ಸೆಸ್ಕ್ ವತಿಯಿಂದ ಮಾರಾಟ ಮಾಡಿದ್ದ LED ಬಲ್ಬ್‌ಗಳನ್ನು ಖರೀದಿಸಿದ್ದು, ಇದರಲ್ಲಿ ಕೆಲವು ಬಲ್ಬ್‌ಗಳು ಕೆಟ್ಟಿದ್ದು, ಕೆಟ್ಟಿರುವ ಬಲ್ಬ್‌ಗಳನ್ನು ಬದಲಾವಣೆ ಮಾಡಿಕೊಡುವಂತೆ ಮನವಿ ಮಾಡಿರುತ್ತಾರೆ.

<u>ಕ್ರಮ:</u> LED ಬಲ್ಬ್‌ಗಳ ವಾರಂಟಿ ಅವಧಿ 3 ವರ್ಷಗಳವರೆಗೆ ಇದ್ದು, ಆರ್.ಆರ್. ಸಂಖ್ಯೆಯನ್ನು ನಮೂದಿಸಿ ಅರ್ಜಿ ನೀಡುವಂತೆ ಸೂಚಿಸಲಾಯಿತು. LED ಬಲ್ಬ್‌ಗಳ ವಿತರಣೆ ಹಾಗೂ ಬದಲಾವಣೆ ಬಗ್ಗೆ ನಿಗಮದಿಂದ ವಿತರಣೆಯಾಗಿರುವ DWA ಪ್ರಕಾರ ಅಗತ್ಯ ಕ್ರಮಕ್ಕಾಗಿ ಏಜೆನ್ಸಿಯವರಿಗೆ ಪತ್ರ ಬರೆಯುವುದಾಗಿ ತಿಳಿಸಲಾಯಿತು.

<u>ದೂರು:</u> ಬೊಮ್ಮೂರು ಅಗ್ರಹಾರ ಗ್ರಾಮದಲ್ಲಿ ಒಂದು ಕಂಬ ಬೀಳುವ ಸ್ಥಿತಿಯಲ್ಲಿದ್ದು, ಈ ಕಂಬವನ್ನು ಬದಲಾಯಿಸಿ ಮುಂದಾಗುವ ಅನಾಹುತವನ್ನು ತಪ್ಪಿಸುವಂತೆ ಮನವಿ ಮಾಡಿರುತ್ತಾರೆ.

<u>ಕ್ರಮ:</u> ಇದರ ಸ್ಥಳವನ್ನು ಕೂಡಲೇ ಪರಿಶೀಲಿಸಿ ಒಂದು ವಾರದೊಳಗೆ ಸದರಿ ಕಂಬವನ್ನು ಬದಲಾವಣೆ ಮಾಡಲು ಅಗತ್ಯ ಕ್ರಮವನ್ನು ತೆಗೆದುಳ್ಳುವಂತೆ ಶಾಖಾಧಿಕಾರಿ, ನಗುವನಹಳ್ಳಿ ಶಾಖೆ ರವರಿಗೆ ಸೂಚಿಸಲಾಯಿತು.

2. <u>ಶ್ರೀ ಸಿ.ಎಸ್. ನರಸಿಂಹಮೂರ್ತಿ, ಶ್ರೀರಂಗಪಟ್ಟಣ ಟೌನ್, ಮೊಬೈಲ್ ನಂ. 98459 56772.</u>

<u>ದೂರು:</u> ರಂಗನಾಯಕಿ ಸ್ತ್ರೀ ಸಮಾಜದ ಬಳಿ ಕಂಬ ಬಾಗಿದ್ದು, ಬಾಗಿರುವ ಕಂಬವನ್ನು ಸರಿಪಡಿಸಿ ಮುಂದಾಗುವ ಅನಾಹುತವನ್ನು ತಪ್ಪಿಸುವಂತೆ ಮನವಿ ಮಾಡಿರುತ್ತಾರೆ.

<u>ಕ್ರಮ:</u> ಈ ಕಂಬವು ವಾಹನವು ಗುದ್ದಿ ಬಾಗಿದ್ದು, ಇದರ ಬಗ್ಗೆ ಆರಕ್ಷಕ ಠಾಣೆಯಲ್ಲಿ Hit & Run Case Book ಆಗಿರುತ್ತದೆ. ಈಗಾಗಲೇ ಅಂದಾಜುಪಟ್ಟಿಯನ್ನು ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದೆ ಎಂದು ಶಾಖಾಧಿಕಾರಿ, ಪಟ್ಟಣ ಶಾಖೆ ರವರು ತಿಳಿಸಿರುತ್ತಾರೆ. ವಿಭಾಗೀಯ ಕಛೇರಿಯಿಂದ ಕಾರ್ಯದೇಶವನ್ನು ನೀಡಲಾಗುವುದು. ಅದರಂತೆ ತಕ್ಷಣ ಕ್ರಮ ಕೈಗೊಳ್ಳಲು ಶಾಖಾಧಿಕಾರಿಯವರಿಗೆ ಸೂಚಿಸಲಾಯಿತು.

<u>ದೂರು:</u> ಆರ್.ಆರ್.ಸಂಖ್ಯೆ: 6814 ರ ಸ್ಥಾವರದ ಬಿಲ್ಲಿನ ಮೊತ್ತವನ್ನು ಅಂಚೆ ಕಛೇರಿಯಲ್ಲಿ ಪಾವತಿಸಿದ್ದರೂ ಹಾಲಿ ಬಂದಿರುವ ಬಿಲ್ಲಿನಲ್ಲಿ ಬಾಕಿ ಬಂದಿದ್ದು, ಇದನ್ನು ಸರಿಪಡಿಸಿಕೊಡುವಂತೆ ಮನವಿ ಮಾಡಿರುತ್ತಾರೆ.

<u>ಕ್ರಮ:</u> ಇದರ ಬಗ್ಗೆ ಹಿರಿಯ ಸಹಾಯಕರಿಗೆ ಸೂಚಿಸಲಾಗಿ ಈ ನ್ಯೂನತೆಯನ್ನು ಸಾಫ್ಟ್‌ವೇರ್‌ನಲ್ಲಿ ಸರಿಪಡಿಸಿ ಅದರ ಮಾಹಿತಿಯನ್ನು (ರಶೀದಿ) ಅಲ್ಲೇ ನೀಡಲಾಯಿತು.

3. <u>ಶ್ರೀ ಮಂಜುನಾಥ, ಪಾಲಹಳ್ಳಿ ಗ್ರಾಮ, ಮೊಬೈಲ್ ನಂ. 74066 66526.</u>

<u>ದೂರು:</u> ಸರ್ವೆ ನಂ. 9 ರಲ್ಲಿನ ವಿದ್ಯುತ್ ಸಂಪರ್ಕಕ್ಕಾಗಿ ಗ್ರಾಮ ಪಂಚಾಯಿತಿ ವತಿಯಿಂದ NOC ಪಡೆದಿದ್ದು, ಸರ್ವೆ ನಂ. 150 ಕ್ಕೆ ವಿದ್ಯುತ್ ಸಂಪರ್ಕ ಪಡೆದು ಬಳಸುತ್ತಿದ್ದು, ವಿದ್ಯುತ್ ಸಂಪರ್ಕ ತೆಗೆಯುವಂತೆ ಮನವಿ ಮಾಡಿರುತ್ತಾರೆ.

<u>ಕ್ರಮ:</u> ದೂರುದಾರರಿಂದ ಅರ್ಜಿ ಪಡೆದುಕೊಂಡು ಸಂಬಂಧಪಟ್ಟ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಪತ್ರ ಬರೆದು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು.

ದೂರು: ಐ.ಪಿ. ಸೆಟ್‌ಗೆಂದು ವಿದ್ಯುತ್ ಮಂಜೂರು ಮಾಡಿಸಿಕೊಂಡು ಹಿಮಾಲಯ ಸ್ಟೋನ್ಸ್ ಕಾರ್ಖಾನೆ ನಡೆಸುತ್ತಿದ್ದು, ವಿದ್ಯುತ್ ಸಂಪರ್ಕ ತೆಗೆಯುವಂತೆ ಮನವಿ ಮಾಡಿರುತ್ತಾರೆ.

ಕ್ರಮ: ಜನರಲ್ ಲೈಸನ್ಸ್ ಪಡೆದಿದ್ದು, ಸದರಿ ಲೈಸನ್ಸ್ ರದ್ದುಪಡಿಸಿರುವ ಪ್ರತಿ ಕೊಟ್ಟಲ್ಲಿ ಅಥವಾ ಇದರ ಬಗ್ಗೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ವತಿಯಿಂದ ರದ್ದುಪಡಿಸಿರುವ ಬಗ್ಗೆ ಸಕಾನಿಇಂ(ವಿ), ಸೆಸ್ಕ್, ಶ್ರೀರಂಗಪಟ್ಟಣ ಉಪವಿಭಾಗ ರವರಿಗೆ ಪತ್ರ ಬರೆದಲ್ಲಿ ಕೂಡಲೇ ವಿದ್ಯುತ್ ಸಂಪರ್ಕವನ್ನು ತೆಗೆಯಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ತಿಳಿಸಲಾಯಿತು.

4. ಶ್ರೀ ಯೋಗಣ್ಣ, ಗಂಜಾಂ, ಮೊಬೈಲ್ ನಂ. 90082 06697.

ದೂರು: ಗುಂಬಸ್ ರಸ್ತೆಯಲ್ಲಿರುವ ತಮ್ಮ ಮನೆ ಬಳಿ ಇರುವ ಕಂಬ ಬಾಗಿದ್ದು, ಸದರಿ ಕಂಬವನ್ನು ಬೇರೆ ಕಡೆಗೆ ಸ್ಥಳಾಂತರಿಸುವಂತೆ ಹಾಗೂ ಸ್ಥಳಾಂತರಕ್ಕೆ ತಗಲುವ ವೆಚ್ಚವನ್ನು ಭರಿಸುವಂತೆ ಮನವಿ ಮಾಡಿರುತ್ತಾರೆ.

ಕ್ರಮ: ಇದರ ಬಗ್ಗೆ ಕೂಡಲೇ ಸ್ಥಳ ಪರಿಶೀಲಿಸಿ ನಿಗಮದ ನಿಯಮಾನುಸಾರ ಅಂದಾಜುಪಟ್ಟಿಯನ್ನು ತಯಾರಿಸಿ ಮುಂದಿನ ಕ್ರಮ ತೆಗೆದುಕೊಳ್ಳುವಂತೆ ಶಾಖಾಧಿಕಾರಿ, ಪಟ್ಟಣ ಶಾಖೆ ರವರಿಗೆ ಸೂಚಿಸಲಾಯಿತು.

5. ಶ್ರೀ ಶಿವಕುಮಾರ್, ಚಿಂದಗಿರಿಕೊಪ್ಪಲು ಗ್ರಾಮ, ಮೊಬೈಲ್ ನಂ. 99007 60313.

ದೂರು: ಗ್ರಾಮದಲ್ಲಿರುವ ಎಲ್ಲಾ ಐ.ಪಿ. ಸೆಟ್‌ಗಳಿಗೆ ಹಾಲಿ ಇರುವ 100 ಕೆವಿಎ ಪರಿವರ್ತಕದ ಮೇಲೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುತ್ತದೆ. ಅಲ್ಲದೇ ಈಗ ಅನಧಿಕೃತ ಪಂಪುಸೆಟ್ಟುಗಳು ಸಹ ಇರುತ್ತವೆ. ಇದೇ ಪರಿವರ್ತಕದಿಂದ ಮನೆಗಳಿಗೆ ವಿದ್ಯುತ್ ಸಂಪರ್ಕವಿದ್ದು, ಓವರ್ ಲೋಡ್‌ನಿಂದ ತೊಂದರೆಯಾಗುತ್ತಿದೆ. ಈ ಸಮಸ್ಯೆಯನ್ನು ಪರಿಹರಿಸಿಕೊಡುವಂತೆ ಮನವಿ ಮಾಡಿರುತ್ತಾರೆ.

ಕ್ರಮ: ಕೂಡಲೇ ಸ್ಥಳ ಪರಿಶೀಲಿಸಿ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಅಂದಾಜುಪಟ್ಟಿ ತಯಾರಿಸಿ E&I ಅಡಿಯಲ್ಲಿ ಕಾಮಗಾರಿ ನಿರ್ವಹಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಶಾಖಾಧಿಕಾರಿ, ಪಟ್ಟಣ ಶಾಖೆ ರವರಿಗೆ ಸೂಚಿಸಲಾಯಿತು.

ದೂರು: ತಮ್ಮ ಜಮೀನಿನಲ್ಲಿ ಹಾಕಿರುವ ಕಂಬಗಳನ್ನು ಬೇರೆ ಕಡೆಗೆ ಸ್ಥಳಾಂತರಿಸುವಂತೆ ಮನವಿ ಮಾಡಿರುತ್ತಾರೆ.

ಕ್ರಮ: ಸದರಿ ಕಂಬಗಳನ್ನು ಸ್ಥಳಾಂತರ ಮಾಡಲು ಸೂಕ್ತ ಸ್ಥಳಾವಕಾಶ ಇರುವುದಿಲ್ಲವೆಂದು ಶಾಖಾಧಿಕಾರಿ, ಪಟ್ಟಣ ಶಾಖೆ ರವರು ತಿಳಿಸಿರುತ್ತಾರೆ.

6. ಶ್ರೀ ಆಂತೋಣಿ ರಾಜ್, ಪಾಲಹಳ್ಳಿ ಗ್ರಾಮ, ಮೊಬೈಲ್ ನಂ. 98457 71491.

ದೂರು: ಏಪ್ರಿಲ್ 2017 ರ ವಿದ್ಯುತ್ ಬಳಕೆಯ ಬಿಲ್ಲು ಮೇ 25 ರ ನಂತರ ಬಂದಿದ್ದು, ಜೂನ್ 7 ರಂದು ವಿದ್ಯುತ್ ಶುಲ್ಕವನ್ನು ಪಾವತಿಸಲಾಗಿದೆ. ಮೇ 2017 ರ ಬಳಕೆಯ ಬಿಲ್ಲಿನಲ್ಲಿ ಏಪ್ರಿಲ್ 2017 ರ ಶುಲ್ಕದ ಮೊತ್ತವು ಬಾಕಿ ಎಂದು ಬಂದಿರುತ್ತದೆ. ಇದನ್ನು ಸರಿಪಡಿಸಿಕೊಡುವಂತೆ ಮನವಿ ಮಾಡಿರುತ್ತಾರೆ.

ಕ್ರಮ: ರೆಗ್ಯುಲರ್ ಮಾಪಕ ಓದುಗರು ರಜೆ ಇದ್ದ ಕಾರಣ ನಿಗಧಿತ ಅವಧಿಯಲ್ಲಿ ಬಿಲ್ ವಿತರಣೆಯಾಗಿಲ್ಲ. ಇನ್ನು ಮುಂದೆ ಈ ರೀತಿಯಾಗದಂತೆ ಕ್ರಮ ವಹಿಸುವುದಾಗಿ ಶಾಖಾಧಿಕಾರಿ, ನಗುವನಹಳ್ಳಿ ಶಾಖೆ ರವರು ತಿಳಿಸಿರುತ್ತಾರೆ.

ಮೇಲ್ಕಂಡ ದೂರುಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಮುಂದಿನ ಜನ ಸಂಪರ್ಕ ಸಭೆಯಲ್ಲಿ ಹಾಜರುಪಡಿಸುವಂತೆ ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು.

:: ಸಭೆಯನ್ನು ಮಧ್ಯಾಹ್ನ 01-30 ಗಂಟೆಗೆ ಮುಕ್ತಾಯಗೊಳಿಸಲಾಯಿತು ::

ಮೆಮೊ ಸಂಖ್ಯೆ: ಕಾನಿಇಂ(ವಿ)/ಕಿಅಸ/ಪಾ.ಪುರ/17-18/CYS-91 ದಿನಾಂಕ: 09-06-2017

ಪ್ರತಿಯನ್ನು ಇವರ ಅವಗಾಹನೆಗೆ ಸಲ್ಲಿಸಲಾಗಿದೆ:

1. ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಲಯ, ಮೈಸೂರು.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಸೆಸ್ಕ್, ನಿಗಮ ಕಾರ್ಯಾಲಯ, ಮೈಸೂರು.
3. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ.

ಪ್ರತಿಯನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ:

1. ಲೆಕ್ಕಾಧಿಕಾರಿ, ಸೆಸ್ಕ್, ಪಾಂಡವಪುರ.
2. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ವಿಭಾಗೀಯ ಕಛೇರಿ, ಪಾಂಡವಪುರ.
3. ಲೆಕ್ಕಾಧಿಕಾರಿ, ಆಂ.ಪ., ಸೆಸ್ಕ್, ಪಾಂಡವಪುರ.
4. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ಉಪವಿಭಾಗ, ಶ್ರೀರಂಗಪಟ್ಟಣ.
5. ಶಾಖಾಧಿಕಾರಿ, ಸೆಸ್ಕ್, ಕಾರ್ಯ ಮತ್ತು ಪಾಲನಾ ಶಾಖೆ, ಪಟ್ಟಣ (ಶ್ರೀರಂಗಪಟ್ಟಣ) / ನಗುವನಹಳ್ಳಿ / ಕೆ. ಶೆಟ್ಟಹಳ್ಳಿ / ಬೆಳಗೊಳ / ಅರಕೆರೆ / ಕೊಡಿಯಾಲ.
6. ಕಿಅಸ / ಮುಕ.

9/6

ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ಪಾಂಡವಪುರ ವಿಭಾಗ.